ಇ ಎಕ್ಸ . ನಂ. 1/2019 ಪಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 5.4.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಡಿ.ಹೆಚ್ಆರ್ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಓ.ಎಸ್ 339/2018ರ ಆದೇಶ ಪಟ್ಟಿ, ಸದರಿ ದಾವೆಯಲ್ಲಿ ನಾನು ನೀಡಿರುವ ನುಡಿ ಸಾಕ್ಷ್ಯದ ದೃಢೀಕೃತ ನಕಲನ್ನು ನಿಪಿ1 ಮತ್ತು ನಿಪಿ2 ಎಂದು, ಗಣಕೀಕೃತ ಪಹಣಿಯ ದೃಢೀಕೃತ ನಕಲನ್ನು ನಿಪಿ3 ಎಂದು, ತೆರಿಗೆ ಪಾವತಿ ರಶೀದಿಯ ದೃಢೀಕೃತ ನಕಲನ್ನು ನಿಪಿ4 ಎಂದು, ದಿನಾಂಕ 20.11.2008ರಂದು ನಾನು ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ5 ಎಂದು, ಆರ್.ಎ 25/2021ರ ಮೆಮೊರಂಡಮ್ ಆಫ್ ಅಪೀಲಿನ ದೃಢೀಕೃತ ನಕಲನ್ನು ನಿಪಿ6 ಎಂದು, ಓ.ಎಸ್ 398/2011ರ ವಿವಾದಾಂಶದ ದೃಢೀಕೃತ ನಕಲನ್ನು ನಿಪಿ7 ಎಂದು, ದಿನಾಂಕ 10.1.2007ರ ಕರಾರುಪತ್ರದ ದೃಢೀಕೃತ ನಕಲನ್ನು ನಿಪಿ8 ಎಂದು, ಗಣಕೀಕೃತ ಪಹಣಿಯ ದೃಢೀಕೃತ ನಕಲನ್ನು ನಿಪಿ9 ಎಂದು, ಮ್ಯುಟೇಶನ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಪಿ10 ಎಂದು, ದಿನಾಂಕ 3.11.2008 ರಂದು ವಕೀಲರ ಮೂಲಕ ನನಗೆ ಕಳುಹಿಸಿರುವ ನೋಟಿಸಿನ ದೃಢೀಕೃತ ನಕಲನ್ನು ನಿಪಿ11 ಎಂದು, ಅಂಚೆ ರಶೀದಿಯನ್ನು ನಿಪಿ12 ಎಂದು, ದಿನಾಂಕ 30.10.2006ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ13 ಎಂದು, ಓ.ಎಸ್ 298/2011ರಲ್ಲಿ ನಾನು ನುಡಿದಿರುವ ನುಡಿಸಾಕ್ಷ್ಯದ ದೃಢೀಕೃತ ನಕಲನ್ನು ನಿಪಿ14 ಎಂದು, ಸದರಿ ದಾವೆಯಲ್ಲಿ ನನ್ನ ತಮ್ಮ ನುಡಿದಿರುವ ನುಡಿಸಾಕ್ಷ್ಯದ ದೃಢೀಕೃತ ನಕಲನ್ನು ನಿಪಿ15 ಎಂದು, ದಿನಾಂಕ 20.11.2008 ರಂದು ನಾನು ವಕೀಲರ ಮೂಲಕ ನೀಡಿರುವ ಎರಡು ನೋಟಿಸುಗಳ ಕಛೇರಿ ಪ್ರತಿಯನ್ನು ನಿಪಿ16 ಮತ್ತು ನಿಪಿ17 ಎಂದು, ದಿನಾಂಕ 3.10.2008ರಂದು ನನಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಪ್ರತಿಯನ್ನು ನಿಪಿ18 ಎಂದು, ದಿನಾಂಕ 11.12.1997ರ ಕರಾರುಪತ್ರದ ದೃಢೀಕೃತ ನಕಲನ್ನು ನಿಪಿ19 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.